ಓ ಎಸ್ **267/19**

ಪಿ ಡಬ್ಲ್ಯೂ **-1**

**ದಿಃ 07.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಕೆ ವಕೀಲರಿಂದಃ

ನನ್ನ ತಾಯಿ ಪಾರ್ವತಮ್ಮನವರು ಮಾರಗೊಂಡನಹಳ್ಳಿಯ ವಾಸಿಯಾಗಿದ್ದರು. ನನ್ನ ತಾಯಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಇದ್ದರು. ನನ್ನ ತಾಯಿ ಮಕ್ಕಳು ಚಿಕ್ಕ ವಯಸ್ಸಿನಲ್ಲಿದ್ದಾಗ ತೀರಿಕೊಂಡಿರುತ್ತಾರೆ ಎಂದರೆ ಸರಿ. ಶಾರದಮ್ಮ ಪಾರ್ವತಮ್ಮರವರ ಸದ್ಯ ತಂಗಿಯಾಗಿರುತ್ತಾರೆ. ನನ್ನ ತಾತ ಮತ್ತು ಅಜ್ಜಿ ಪಾರ್ವತಮ್ಮನವರು ತೀರಿಕೊಂಡ ನಂತರ ನನ್ನ ತಾಯಿಯ ತಂಗಿಯನ್ನು ನನ್ನ ತಂದೆಗೆ ಮದುವೆ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಾಯಿ ತೀರಿಕೊಂಡ ನಂತರ ನಮ್ಮನ್ನು ಸಾಕಿ ಸಲುಹಿದವರು ನನ್ನ ತಾಯಿಯ ತಂಗಿ ಎಂದರೆ ಸರಿ. ನಾವು ನಾಲ್ಕು ಜನ ಹೆಣ್ಣು ಮಕ್ಕಳು ಮದುವೆಯಾದ ಮೇಲೆ ನಮ್ಮ ಗಂಡನ ಮನೆಯಲ್ಲಿರುತ್ತೇವೆ ಎಂದರೆ ಸರಿ. ನನ್ನ ಮತ್ತು ನನ್ನ ಸಹೋದರಿಯರು ಮದುವೆಯಾಗಿ ಎಷ್ಟು ವರ್ಷಗಳು ಆಗಿರುತ್ತದೆ ಎಂದರೆ ಸಾಕ್ಷಿ ಸುಮಾರು 40 ವರ್ಷಗಳು ಆಗಿರಬಹುದು ಎಂದು ಹೇಳುತ್ತಾರೆ. ನಾಲ್ಕು ಜನರ ಮದುವೆ ಮಾಡುವ ಕಾಲಕ್ಕೆ ನನ್ನ ತಾತ ಗೌಡಯ್ಯರವರು ಕೂಲಿ ಮಾಡಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಗೌಡಯ್ಯರವರು ಗಟ್ಟಿಯಾಗಿ ಇರಲಿಲ್ಲ ಎಂದರೆ ಸರಿ.

ನಮ್ಮ ಜಮೀನುಗಳಲ್ಲಿ ಉತ್ಪತ್ತಿ ಇಲ್ಲದೇ ಇರುವ ಕಾರಣ ನನ್ನ ತಾತ ಅಜ್ಜಿ ನಮಗೆ ಮದುವೆ ಮಾಡಲು ಸಹಾಯ ಮಾಡಿದ್ದರು ಎಂದರೆ ಸಾಕ್ಷಿ ನಮ್ಮ ತಂದೆಗೆ ಊಟಕ್ಕೆ ಕಷ್ಟ ಆಗುತ್ತಿತ್ತು ಎಂದು ನುಡಿಯುತ್ತಾರೆ ಆದ್ದರಿಂದ ಅವರವರೇ ಅಂದರೆ ಅವರ ಗಂಡನ ಮನೆಯವರು ಖರ್ಚು ಮಾಡಿ ಮದುವೆ ಮಾಡಿಕೊಂಡಿರುತ್ತಾರೆ. ನನ್ನ ತಂದೆಯವರು ಕಾಲವಾಗುವವರೆಗೂ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿ ದನಕರು ಮೇಯಿಸಿಕೊಂಡು ಇದ್ದರು ಎಂದು ನುಡಿಯುತ್ತಾರೆ. ನನ್ನ ಚಿಕ್ಕಮ್ಮನವರಿಗೆ ಮೂರು ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಇರುತ್ತಾರೆ. 3 ಜನ ಹೆಣ್ಣು ಮಕ್ಕಳು ಕೂಡ ನಮ್ಮ ಮತ್ತು ನಮ್ಮ ಸಹೋದರಿಯರ ತರ ಗಂಡನ ಮನೆಯವರೇ ಮದುವೆ

ಮಾಡಿಕೊಂಡು ಹೋಗಿರುತ್ತಾರೆ. ನಮ್ಮ ಚಿಕ್ಕಮ್ಮನ ಮಕ್ಕಳನ್ನು ನಾವೇ ಸಾಕಿರುತ್ತೇವೆ. ನಮ್ಮ ತಂದೆಯವರಿಗೆ ಏನು ಆದಾಯ ಇಲ್ಲದೇ ಇರುವ ಕಾರಣ ನಾವೇ ಸಾಕಿರುತ್ತೇವೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**